## ಖಜುರಾಹೋದ ಏಕೈಕ ಪೂಜಾಮಂದಿರ !

ಅತ್ಯಂತ ಸುಂದರ ರತಿಶಿಲ್ಪಗಳಿರುವ ಮಧ್ಯಪ್ರದೇಶದ ವಿಶ್ವಪ್ರಸಿದ್ಧ ಖಜುರಾಹೋ ಮಂದಿರಗಳು ಈಗ ಪೂಜೆಯಿಲ್ಲದೇ ಬರಿಯ ಪ್ರವಾಸಿತಾಣಗಳಿವೆ. ಆದರೆ ಇವುಗಳಲ್ಲಿನ ಒಂದು ಮಂದಿರದಲ್ಲಿ ಈಗಲೂ ಪೂಜೆ ನಡೆಯುತ್ತದೆ. ಅದುವೇ ಮಾತಂಗೇಶ್ವರ ಮಂದಿರ. ಖಂಡರೀಯ ಮಹಾದೇವ, ಲಕ್ಷ್ಮಣಮಂದಿರ ಮೊದಲಾದ ಪಶ್ಚಿಮ ಸಮೂಹದ ಮಂದಿರಗಳ ಸನಿಹವೇ ಇರುವ ಈ ಮಂದಿರ ಯಾವುದೇ ರತಿಶಿಲ್ಪಗಳಿಂದಾಗಲೀ ಇತರ ಶಿಲ್ಪಗಳಿಂದಾಗಲೀ ಅಲಂಕೃತಗೊಂಡಿಲ್ಲ. ಇದು ಖಜುರಾಹೋದ ಅತ್ಯಂತ ಪ್ರಾಚೀನ ಮಂದಿರ.

ಒಳಗಿನ ಗರ್ಭಗುಡಿಯ ಬಹುತೇಕ ಭಾಗ, ಸುಮಾರು ಆರು ಮೀಟರ್ ವಿಸ್ತೀರ್ಣದ ಗೌರೀಪಟ್ಟವಿದ್ದು, ಅದರ ಮೇಲೆ ಸುಮಾರು ಎರಡೂವರೆ ಮೀಟರ್ ಉದ್ದದ ಹಾಗೂ ಒಂದು ಮೀಟರ್ ಅಗಲದ ಬಹುದೊಡ್ಡ ಶಿವಲಿಂಗವಿದೆ! ಒಳಗೆ ಜಾಗವಿಲ್ಲದೇ, ಪೂಜಾರಿಯು ಗೌರೀಪಟ್ಟದ ಮೇಲೆಯೇ ಕುಳಿತಿರುತ್ತಾನೆ! ನಾವೂ ಇದರ ಮೇಲೆಯೇ ಹತ್ತಿ ಶಿವಲಿಂಗದ ಪ್ರದಕ್ಷಿಣೆ ಮಾಡಬೇಕು! ಲಿಂಗದ ಮೇಲೆ ಪರ್ಷಿಯನ್ ಮತ್ತು ದೇವನಾಗರಿ ಲಿಪಿಗಳ ಬರಹಗಳಿವೆ. ಶಿವರಾತ್ರಿಯ ದಿನ, ಇಲ್ಲಿಗೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ.

**ಚಿತ್ರ- ಬರಹ: ಡಾ|| ಬಿ.ಆರ್.ಸುಹಾಸ್, ಬೆಂಗಳೂರು**






## ಪುಸ್ತಕದಲ್ಲಿ ಅರಳಿದ ಕಲೆ

ಪುಸ್ತಕವೊಂದರಿಂದ ಕರಕುಶಲ ಕಲೆ ರಚಿಸಬಹುದು ಎಂಬುದಕ್ಕೆ ಈ ಚಿತ್ರ ಸಾಕ್ಷಿ. ಶೃಂಗೇರಿ ತಾಲೂಕಿನ ಶೆಟ್ಟಿಹಳ್ಳಿ ವೀಣಾ ಹಳೆ ಪುಸ್ತಕವನ್ನು ಕಲಾತ್ಮಕವಾಗಿ ಮಡಚಿ ಅಲಂಕಾರಿಕ ವಸ್ತುವನ್ನು ಸಿದ್ಧಪಡಿಸಿದ್ದಾರೆ. ಹೆಚ್ಚಿನ ಖರ್ಚು ಇಲ್ಲದೇ ಅಲಂಕಾರಿಕ ವಸ್ತುವೊಂದನ್ನು ತಯಾರಿಸಿದ್ದಾರೆ.

**- ಕೆರೆಮನೆ ಗೋಪಾಲಕೃಷ್ಣ, ಶೃಂಗೇರಿ**



## ಅಪರೂಪದ ಅಂಚೆ ಚೀಟಿಗಳು

ಈ ಚಿತ್ರದಲ್ಲಿ ಕಾಣುವ ಅಂಚೆ ಚೀಟಿಗಳು ಬಲು ಅಪರೂಪದ್ದಾಗಿದ್ದು, ಇದು ಸೂರ್ಯ ನಮಸ್ಕಾರದಲ್ಲಿರುವ ಪ್ರತಿಯೊಂದು ಆಸನವನ್ನೂ ತೋರಿಸುತ್ತಿದೆ. ಈ ಅಂಚೆ ಚೀಟಿಯು ತುಮಕೂರು ಜಿಲ್ಲೆಯ ತುರುವೇಕೆರೆ ಪಟ್ಟಣದ ಮೂರನೆಯ ತರಗತಿಯಲ್ಲಿ ಓದುತ್ತಿರುವ ನನ್ನ ಮೊಮ್ಮಗನಾದ ಪ್ರಣಬ್ ವೈ. ನ ಅಂಚೆ ಚೀಟಿ ಸಂಗ್ರಹದಲ್ಲಿದೆ.

**- ರಮಾಮಣಿ ಹೆಚ್.ಎಸ್., ತುರುವೇಕೆರೆ**